

## ಅಳಿವಿನ ಅಂಚಿನಲ್ಲಿ 'ಬಾಗಿಲ್ಗಂಟೆ'!

ಉತ್ತರಕನ್ನಡ ಜಿಲ್ಲೆಯ ಮಲೆನಾಡಿನ ಹಳ್ಳಿಗಳಲ್ಲಿ ಇಂದಿಗೂ ಕಾಣುವ 'ಬಾಗಿಲ್ಗಂಟೆ' (ಬಾಗಿಲು ಗಂಟೆ) ನಮ್ಮ ಬದುಕಿನ ಕೊಂಡಿಯಾಗಿ ಬದುಕಿಕೊಂಡಿದೆ. ದೇವಾಲಯ ಹಾಗೂ ದನಗಳಿಗೆ ಕಟ್ಟುವ ಆಕಾರದ ಗಂಟೆಯನ್ನು ಬಾಗಿಲಿಗೆ ಜೋಡಿಸಿ ಹೊರಗೆ ದಾರವನ್ನು ಇಳಿಬಿಟ್ಟಿರುತ್ತಾರೆ. ಹೊರಗಿನವರು ಬಂದು ದಾರವನ್ನು ಎಳೆದಾಗ ಗಂಟೆ ದೊಡ್ಡಕ್ಕೆ ಸಪ್ಪಳ ಮಾಡುತ್ತದೆ. ಅಷ್ಟೇ ಅಲ್ಲದೆ ಮನೆಯವರೆಲ್ಲ ತೋಟದ ಕೆಲಸದಲ್ಲಿ ತೊಡಗಿಕೊಂಡಾಗ ಕಳ್ಳಕಾಕರು ಬೀಗ ಮುರಿದು ಬಾಗಿಲ ತೆರೆದಾಗಲು ಈ ಬಾಗಿಲ್ಗಂಟೆ ಬಾರಿಸಿ ಕೊಳ್ಳುತ್ತದೆ.

'ನಮ್ಮ ಪೂರ್ವಜರು ಸೋಗೆ ಹಾಗೂ ಹಂಚಿನ ಮನೆಗಳಲ್ಲಿ ಕಡ್ಡಾಯವಾಗಿ ಈ ಬಾಗಿಲ್ಗಂಟೆಯನ್ನು ಕೂಡ್ರಿಸುತ್ತಿದ್ದರು. ಈಗ ಕಾಲ ಬದಲಾಗಿ ಮಲೆನಾಡಿನ ಹಳ್ಳಿಗಳಲ್ಲೂ ಆರ್.ಸಿ.ಸಿ. ಮನೆಗಳು ತಲೆ ಎತ್ತಲು ಪ್ರಾರಂಭವಾದ ನಂತರ ಬಾಗಿಲ್ಗಂಟೆಗಳು ಅಳಿವಿನತ್ತ ಸಾಗಿವೆ' ಎನ್ನುತ್ತಾರೆ ಉದ್ಯಮಿ, ಆಧುನಿಕ ಕೃಷಿಕ ಹಾಗೂ ಸಾಮಾಜಿಕ ಕಾರ್ಯಕರ್ತ ಎಂ.ಆರ್. ಹೆಗಡೆ, ಕುಂಬ್ರಿಗುಡ್ಡೆ ಅವರು.

—ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ

## ಶಮಿ ವೃಕ್ಷಕ್ಕೆ ನಿತ್ಯ ಪೂಜೆ!

ಸಾಮಾನ್ಯವಾಗಿ ವಿಜಯದಶಮಿಯಂದು ಶಮಿ ಅಥವಾ ಬನ್ನಿ ಮರಕ್ಕೆ ಪೂಜೆ ಮಾಡುವುದನ್ನು ನೋಡಿರುತ್ತೇವೆ. ಆದರೆ ರಾಯಚೂರಿನ ದೇವಸೂಗುರು ಗ್ರಾಮದಲ್ಲಿ ಶಮಿ ವೃಕ್ಷಕ್ಕೆ ಪ್ರತಿದಿನವೂ ಪೂಜೆ ನಡೆಯುತ್ತದೆ. ಶಮಿ ವೃಕ್ಷವನ್ನು ಪೂಜಿಸುವುದರಿಂದ ಶನಿ ದೇವನ ದುಷ್ಪರಿಣಾಮಗಳು ಕಡಿಮೆಯಾಗುತ್ತವೆಂಬುದು ನಂಬಿಕೆ. ಆದುದರಿಂದ ನಿತ್ಯವೂ ಮರಕ್ಕೆ ಪೂಜೆ ಸಲ್ಲಿಸಲು ಬೆಳಗಿನ ಜಾವ ಮತ್ತು ಸಾಯಂಕಾಲ ಜನರು ಸಾಲು ಸಾಲಾಗಿ ಬರುತ್ತಾರೆ. ಪ್ರತಿ ಗುರುವಾರ ಶಮಿ ವೃಕ್ಷದ ಕೆಳಗೆ ಸಾಸಿವೆ ಎಣ್ಣೆಯ ದೀಪವನ್ನು ಹಚ್ಚುವುದರಿಂದ, ಮದುವೆಯ ಭಾಗ್ಯ ಸಿಗುತ್ತದೆ ಎಂಬ ನಂಬಿಕೆ ಇದೆ.

—ವಿಜಯಕುಮಾರ್ ಎಚ್. ಕೆ., ರಾಯಚೂರು





## ಮಾದೂರು ಮಹಾಸತಿ ಮಾಸ್ತೆಮ್ಮ!

ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಮಾದೂರು ಗ್ರಾಮದಲ್ಲಿ ಮಾಸ್ತಿಗಲ್ಲಿಗೆ ದೇವಸ್ಥಾನ ನಿರ್ಮಿಸಲಾಗಿದೆ. ದೇಗುಲದ ದೇವತೆ ಮಾಸ್ತೆಮ್ಮ 'ಮಹಾಸತಿ' ಅಂತಲೂ ಹೆಸರವಾಸಿ. ಪ್ರತಿವರ್ಷವೂ ಬನದ ಹುಣ್ಣಿಮೆ ಬಳಿಕ ಗ್ರಾಮದಲ್ಲಿ ಮಾಸ್ತೆಮ್ಮ ಜಾತ್ರೆಯು ವಿಜೃಂಭಣೆಯಿಂದ ಏಳು ದಿನಗಳ ನಡೆಯುತ್ತದೆ. ತಾಲ್ಲೂಕು ಸೇರಿದಂತೆ ಜಿಲ್ಲೆಯ ವಿವಿಧ ಕಡೆಗಳಿಂದಲೂ ಸಾವಿರಾರು ಭಕ್ತರು ಇಲ್ಲಿಗೆ ಬರುತ್ತಾರೆ. ಗ್ರಾಮದಲ್ಲಿ ಮಾಸ್ತೆಮ್ಮ, ಮಾಸ್ತೆಪ್ಪ ಎನ್ನುವ ಹೆಸರುಗಳ ಜನರೇ ಹೆಚ್ಚಾಗಿ ಸಿಗುತ್ತಾರೆ.

ವಿಜಯನಗರ ಅರಸರ ಕಾಲದಲ್ಲಿ ನಡೆದ ಯುದ್ಧದಲ್ಲಿ ಗ್ರಾಮದ ವೀರ ಯೋಧ ಮಲ್ಲೋಜ ಮೃತನಾಗುತ್ತಾನೆ. ಪತಿಯ ಸಾವಿನಿಂದ ನೊಂದ ಮಾಸ್ತೆಮ್ಮ(ಮಹಾಸತಿ) ಚಿತೆ ಏರುತ್ತಾಳೆ. ವೀರಯೋಧ ಮತ್ತು ಪತ್ನಿಯ ತ್ಯಾಗದ ಸಂಕೇತವಾಗಿ ಗ್ರಾಮದಲ್ಲಿ ಮಾಸ್ತಿಗಲ್ಲು (ಮಹಾಸತಿ ಕಲ್ಲು) ಸ್ಥಾಪಿಸಲಾಗಿದೆ. ಕಲ್ಲಿನಲ್ಲಿ ಪತಿ ಪತ್ನಿಯ ಉಬ್ಬು ಚಿತ್ರಗಳಿವೆ. ಪ್ರತಿದಿನವೂ ಈ ಕಲ್ಲು ಪೂಜಿಸಲ್ಪಡುತ್ತದೆ. ಹೂಗಳಿಂದ ಅಲಂಕರಿಸಲಾಗುತ್ತದೆ. ಈ ಮಾಸ್ತಿಗಲ್ಲಿಗೆ ಬೃಹದಾಕಾರದ ದೇವಸ್ಥಾನ ಮತ್ತು ಕಮಾನು ನಿರ್ಮಿಸಲಾಗಿದೆ.

—ಸಿ. ಶಿವಾನಂದ, ಹಗರಿಬೊಮ್ಮನಹಳ್ಳಿ